**Q.P. Code – 31514**

## Fifth Semester B.A. Degree Examination, October/November 2019

*(CBCS – Semester Scheme)*

**ಐಚ್ಛಿಕ ಕನ್ನಡ**

### Paper VI – ಸಾಹಿತ್ಯ ಸೌರಭ – 06, ಕಾದಂಬರಿ ವೈಶಾಖ, ಆಯ್ದ ಸಣ್ಣ ಕಥೆಗಳು, ಜೀವನ ಚರಿತ್ರೆ – ಲೋಹಿಯಾ

*Time : 3 Hours]* *[Max. Marks : 90*

**ಭಾಗ-1**

**(ಕಾದಂಬರಿ - ವೈಶಾಖ)**

I. (ಅ) ಒಂದು ಭಾಗದ ಮಹತ್ವವನ್ನು ವಿವರಿಸಿ : **(1 × 6 = 6)**

1. "ನೀ ತಂದು ಕ್ವಟ್ಟ ಔಷಧಿ ಇನ್ನೊಂದು ಎಂಟು ಜಿನ ಆಗಬೈದು ಕನೋ ಲಕ್ಕ. ಅಮ್ಯಾಕೆ ಪುನಾ ನೀನೇ ತಂದು ಕ್ವಡಬೇಕು... ಬುದ್ಧಿಯೋರೂವೆ ಲಕ್ಕನೇ ನಂಬಿಕಸ್ತ, ಅವ್ನ ಕೈಲೀ ತರಿಸೊಂದವರೆ... ಅಂಗೇಯ ನೀ ತಂದಾಗ್ಲೆಲ್ಲ ನಮ್ಮಟ್ಟಿದಲ್ಲೇ ಉಂತೋಗಲಿ ಅಂತಾನು ಅಂದ್ರು" ಎಂದ.

2. ಹೆಣ್ಣು ಎಂದರೆ ಹೆಬಗನೂ ನಕ್ಕ ಎನ್ನುವ ಗಾದೆಯೇ ಇಲ್ಲವೆ?... ಒಂದು ಪಕ್ಷ ನಾನು ಕೇಳೇ ಬಿಟ್ಟೆ ಅನ್ನೋಣ. ಆಗ ಅವರು, 'ಹೌದು, ನಿಜ. ಆ ಹೆಣ್ಣು ನನಗೆ ಪ್ರಿಯವಾಯಿತು. ಅದರಿಂದ ನಿನಗೇನು ಕೊರತೆ ಮಾಡಿದ್ದೇನೆ?' ಎಂದು ಬಿಟ್ಟರೆ?... ನಮ್ಮ ಬ್ರಾಹ್ಮಣ ಕೇರಿ ಮಾತ್ರವಲ್ಲದೆ, ಊರಿನ ಬೇರೆ ಬೇರೆ ಕೇರಿಗಳ ಅದೆಷ್ಟು ಮಂದಿ ಗೃಹಸ್ಥರು, ಇದೇ ಕೆಲಸ ಮಾಡುತ್ತಿಲ್ಲ?!...

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3 × 3 = 9)**

1. "ಅಕ್ಕ ಅಲ್ನೋಡೆ, ನಮ್ಮನ್ನೆ ತಿಂದಾಕೊ ಹಾಗೇ ನೋಡ್ತಿದಾನೆ. ನನಗೆ ಯಾಕೊ ಭಯವಾಗುತ್ತಮ್ಮ."
2. "ಇದೇನು ಕಿಟ್ಟಣ್ಣ ದೇವರಿಗೆ ಅಪಚಾರವಾಗಲಿಲ್ಲವೆ?"
3. "ಇನ್ನು ನಾನು ಹುಡುಗಾಟ ಆಡಲ್ಲ. ನನ್ನ ಪ್ರಾಣೇಶ್ವರಿ ಪ್ರಾಣ ಸಂಕಟಾನ ತಪ್ಪಿಸ್ತೇನೆ."
4. ಇಂಥ ಮಗಳ ಪಡೆಯೋಕೆ ನೀನು ಬಲು ಪುಣ್ಯಮಾಡಿದ್ದೆ ಕಣೋ, ನಿಂಗ!

(ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ಕೇಶವಯ್ಯ
2. ಸಿವುನಿ
3. ಬುಂಡಮ್ಮ

SIDDAGANGA COLLEGE OF ARTS, SCIENCE & COMMERCE FOR WOMEN
TUMKUR.
LIBRARY & INFORMATION CENTRE
Page No ........
Date ........

II. ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ನಂಜೇಗೌಡನ ವ್ಯಕ್ತಿತ್ವವನ್ನು ವಿವರಿಸಿ.
2. ಸಂಯಮ ಕಳೆದು ಕೊಂಡ ನಂತರದಲ್ಲಿ ಕೃಷ್ಣಶಾಸ್ತ್ರಿ ಅನುಭವಿಸಿದ ಮಾನಸಿಕ ಯಾತನೆಯನ್ನು ವಿವರಿಸಿ.
3. ಲಕ್ಕನಿಗೆ ಗಡೀಪಾರಿನ ಶಿಕ್ಷೆ ವಿಧಿಸಲು ಕಾರಣವೇನು? ವಿವರಿಸಿ.

## ಭಾಗ-2
### (ಆಯ್ದ ಸಣ್ಣ ಕತೆಗಳು)

III. (ಅ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ವೆಂಕಟಿಗನ ಊರು ಯಾವುದು?
2. ಲಿಂಗನ ಮಗನ ಹೆಸರೇನು?
3. 'ಗರ್ಜನೆ' ಕತೆಯ ಕರ್ತೃವನ್ನು ಹೆಸರಿಸಿ.
4. ಮರಿನಂಜನಿಗೆ ಕುರಿನಂಜ ಎನ್ನುವ ಹೆಸರು ಬರಲು ಕಾರಣವೇನು?
5. ವರ್ತಕನು ಮೃಗದ ಬಳಿಗೆ ಯಾರನ್ನು ಕಳುಹಿಸಿದನು?

(ಆ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2 × 5 = 10)

1. ಬೆಸಗರಹಳ್ಳಿ ರಾಮಣ್ಣ
2. ಲಿಂಗನ ಜೈಲುವಾಸ
3. ಸುಂದರಿಯ ಗೃಹ
4. ರಂಗಿ

(ಇ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (2 × 10 = 20)

1. ವೆಂಕಟಿಗನ ಹೆಂಡತಿ ಕತೆಯ ಆಶಯವೇನು? ತಿಳಿಸಿ.
2. 'ಯಾರೂ ಅರಿಯದ ವೀರ' ಕಥೆಯಲ್ಲಿ, ಲಿಂಗನ ಸ್ವಾಮಿನಿಷ್ಠೆ ಹೇಗೆ ವ್ಯಕ್ತವಾಗಿದೆ?
3. ಕುರಿನಂಜ ಸ್ವಾಭಿಮಾನಿಯಾಗಿ ಪರಿವರ್ತನೆಯಾದ ಬಗೆ ಕತೆಯಲ್ಲಿ ಹೇಗೆ ನಿರೂಪಿತವಾಗಿದೆ?
4. 'ಮೃಗ ಮತ್ತು ಸುಂದರಿ' ಕತೆಯಲ್ಲಿ ವ್ಯಕ್ತವಾಗಿರುವ ಮೌಲ್ಯ ಸಂಘರ್ಷವನ್ನು ವಿವರಿಸಿ.

## ಭಾಗ-3
### (ಜೀವನ ಚರಿತ್ರೆ - ಲೋಹಿಯಾ)

IV. (ಅ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ಲೋಹಿಯಾರವರ ಪೂರ್ವಜರು ಯಾವ ವ್ಯಾಪಾರ ಮಾಡುತ್ತಿದ್ದರು?
2. ಲೋಹಿಯಾ ಅವರ ತಂದೆಯ ಹೆಸರೇನು?
3. ಕಲ್ಕತ್ತೆಯಲ್ಲಿ ಲೋಹಿಯಾ ಬಿ.ಎ. ವಿದ್ಯಾಭ್ಯಾಸಕ್ಕಾಗಿ ಸೇರಿಕೊಂಡ ಕಾಲೇಜಿನ ಹೆಸರೇನು?
4. ಯಾವ ವಿಶ್ವವಿದ್ಯಾನಿಲಯದಿಂದ ಲೋಹಿಯಾ ಪಿ.ಎಚ್.ಡಿ. ಪದವಿಯನ್ನು ಪಡೆದರು?
5. ಲೋಹಿಯಾ ಅವರು ರಚಿಸಿದ ಕೃತಿಯೊಂದನ್ನು ಹೆಸರಿಸಿ.

Q.P. Code – 31514

(ಆ) ಒಂದಕ್ಕೆ ಟಿಪ್ಪಣಿ ಬರೆಯಿರಿ : (1 × 5 = 5)

1. ರಾಷ್ಟ್ರೀಯ ಬಕೆಟ್

2. ಲೀಗ್ ಆಫ್ ನೇಶನ್ಸ್ ಅಧಿವೇಶನದಲ್ಲಿ ಲೋಹಿಯಾರ ಪ್ರತಿಭಟನೆ.

3. ಗಂಗೆಯ ದಡದಿಂದ ಸರಯೂ ದಡಕ್ಕೆ ಲೋಹಿಯಾ ಕುಟುಂಬದ ವಲಸೆ.

4. ಲೋಹಿಯಾರ ಶಸ್ತ್ರರಹಿತ ನಗರದ ಕಲ್ಪನೆ.

(ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1 × 10 = 10)

1. ಲಾಹೋರ್ ಕೋಟೆಯಲ್ಲಿ ಲೋಹಿಯಾ ಅನುಭವಿಸಿದ ಹಿಂಸೆಯ ಸ್ವರೂಪವನ್ನು ವಿವರಿಸಿ.

2. ಸ್ವಾತಂತ್ರ್ಯ ಹೋರಾಟದಲ್ಲಿ ಲೋಹಿಯಾ ಅವರ ಪಾತ್ರದ ಕುರಿತು ಬರೆಯಿರಿ.

---

SREE SIDDAGANGA COLLEGE OF ARTS, SCIENCE & COMMERCE FOR WOMEN
TUMKUR.
LIBRARY & INFORMATION CENTRE
Page No ........
Date..........